ಶ್ರೀ ಕ್ಷೇತ್ರ ಸೊಗಲದಲ್ಲಿ ಶೌಚಾಲಯ ನಿರ್ಮಿಸುವ ಬಗ್ಗೆ.

೧೧೫ ಶ್ರೀ ಶಿವಾನಂದ ಹೆಚ್. ಕಾಡಲಗಿ (ಬೈಲಹೊಂಗಲ).— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಳಗಾವಿ ಜಿಲ್ಲೆಯ ಶ್ರೀ ಕ್ಷೇತ್ರ ಸೊಗಲದಲ್ಲಿ ಪ್ರವಾಸಿಗರ ಅನುಕೂಲತೆಗಾಗಿ ಪ್ರವಾಸೋದ್ಯಮ ಇಲಾಖೆ ವತಿಯಿಂದ ದಿನಾಂಕ ೨೫-೩-೧೯೯೯ ರಂದು ಶೌಚಾಲಯವನ್ನು ಕಟ್ಟಲು ಸರ್ಕಾರದ ಆಜ್ಞೆ ಹೊರಡಿಸಲಾಗಿತ್ತೆ?

ಆ) ಈ ಕೆಲಸಕ್ಕೆ ತಾಂತ್ರಿಕ ಮಂಜೂರಾತಿ ಯಾವಾಗ ಕೊಡಲಾಗಿದೆ?

ಇ) ಹಾಗಿದ್ದಲ್ಲಿ ಈ ಕೆಲಸಕ್ಕೆ ಇದುವರೆವಿಗೂ ಆದ ವೆಚ್ಚವೆಷ್ಟು ಮತ್ತು ಈ ಕೆಲಸ ಪ್ರಸ್ತುತ ಯಾವ ಹಂತದಲ್ಲಿದೆ?

ಈ) ಈ ಕೆಲಸ ಮುಗಿಸಲು ಇನ್ನು ಎಷ್ಟು ದಿವಸಗಳು ಬೇಕಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು)

ಅ) ಹೌದು

ಆ) ಇ) ಮತ್ತು ಈ ವಿಷಯದಲ್ಲಿ ಪರಿಪ್ಯ್ತ ಅಂದಾಜು ಪಟ್ಟಿಯನ್ನು ತಯಾರಿಸಲಾಗುತ್ತಿದೆ.

ಬೆಳಗಾವಿ ಜಿಲ್ಲೆಯಲ್ಲಿ ಪ್ರವಾಸಿಗರಿಗಾಗಿ ಆಕರ್ಷಣೀಯ ಸ್ಥಳಗಳನ್ನು ಅಭಿವೃದ್ಧಿ ಪಡಿಸುವ ಬಗ್ಗೆ

೧೧೦ ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ ?

ಅ) ಬೆಳಗಾವಿ ಜಿಲ್ಲೆಯ ಗೋಡಚಿನಮಲ್ಕಿ, ಗೋಕಾಕ್ ಫಾಲ್ಸ್, ಧೂಪದಾಳ ಪಕ್ಷಿಧಾಮ, ಹಿಡಕಲ್ ಡ್ಯಾಂ ಈ ಆಕರ್ಷಣೀಯ ಸ್ಥಳಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರದ ಕಾರ್ಯಕ್ರಮಗಳೇನು?

ಆ) ಬೆಳಗಾವಿ ಜಿಲ್ಲೆಯ ಹಲಸಿ ಹಂದಿಬಡಗನಾಥ, ಕನಕುಂಬಿ ಪ್ರವಾಸಿ ಕೇಂದ್ರಗಳನ್ನು ಅಭಿವೃದ್ಧಿ ಮಾಡಲು ಸರ್ಕಾರದ ವಿಶೇಷ ಕಾರ್ಯಕ್ರಮಗಳೇನು?

ಶ್ರೀ ರೇಣುಕಾ ಎಲ್ಲಮ್ಮ ದೇವಸ್ಥಾನದಲ್ಲಿ ಪ್ರವಾಸೋದ್ಯಮ ಸಂಸ್ಥೆಯಿಂದ ೧೦೦ ಹಾಸಿಗೆಗಳ ವಿಶ್ರಾಂತಿ ಧಾಮವನ್ನು ಕಟ್ಟಲು ಸರ್ಕಾರದ ಕಾರ್ಯಕ್ರಮವೇನಾದರೂ ಇದೆಯೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು).—

ಅ) ಗೋಕಾಕ್ ಫಾಲ್ಸ್ ಅಭಿವೃದ್ಧಿ ಪಡಿಸಲು ಉದ್ದೇಶಿಸಲಾಗಿದೆ.

ಆ) ಹಲಸಿ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಲಾಗಿದೆ.

ಇ) ಪ್ರವಾಸಿ ಸೌಧದ ಕಾರ್ಯಕ್ರಮ ಪರಿಶೀಲನೆಯಲ್ಲಿದೆ.

ಅಧ್ಯಕ್ಷರು:— ಮಂಡಿಸಲಾಯಿತು.

ವರದಿಯನ್ನು ಒಪ್ಪಿಸುವುದು

ಶ್ರೀ ಬಾಬುಗೌಡ ಪಾಟೀಲ್.—ಮಾನ್ಯ ಅಧ್ಯಕ್ಷರೇ:—ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಐದನೆಯ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಎ. ಟಿ. ರಾಮಸ್ವಾಮಿ.—ಮಾನ್ಯ ಅಧ್ಯಕ್ಷರೇ ಸಭೆಯು ವರದಿಯನ್ನು ಒಪ್ಪುವುದೆಂದು ಸೂಚಿಸುತ್ತೇನೆ.

ಸಭೆಯು ಒಪ್ಪಿಗೆ ನೀಡಿತು

ಅಧ್ಯಕ್ಷರು:— ಇಂದು ಶ್ರೀಮತಿ ನಾಗರತ್ನಮ್ಮನವರ ಜನ್ಮದಿನ. ನಾನು ಅವರಿಗೆ ನನ್ನ ಪರವಾಗಿ ಮತ್ತು ಸದನದ ಪರವಾಗಿ ಹಾರ್ದಿಕ ಶುಭಾಶಯಗಳನ್ನು ಕೋರುತ್ತೇನೆ.

ಶ್ರೀ ವಾಟಾಳ್ ನಾಗರಾಜ್:—ಮಾನ್ಯ ಅಧ್ಯಕ್ಷರೇ, ನಮ್ಮ ಚಾಮರಾಜನಗರ ತಾಲ್ಲೂಕಿನಲ್ಲಿನ ವಿದ್ಯುಚ್ಛಕ್ತಿ ಅಭಾವದ ಬಗ್ಗೆ ನಾನು ಒಂದು ವರ್ಷದಿಂದ ಈ ಸದನದಲ್ಲಿ ಒಂದಲ್ಲ ಅನೇಕ ಬಾರಿ ಪ್ರಸ್ತಾಪ ಮಾಡಿ ಆ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನು ಸೆಳೆದಿದೆ. ಇದರ ಬಗ್ಗೆ ಒಂದು ಸಭೆಯನ್ನು ಕರೆಯುತ್ತೇವೆಂದು ಹೇಳಿದರು. ಆ ಭಾಗದ ನೀರಾವರಿ ಪಂಪು ಸೆಟ್ಟುಗಳಿಗೆ ಇದುವರೆಗೆ ಅಂದರೆ ಕಳೆದ ೫–೬ ವರ್ಷಗಳಿಂದ ವಿದ್ಯುಚ್ಛಕ್ತಿ ಕೊಟ್ಟಿಲ್ಲ. ಇದರಿಂದಾಗಿ ಅಲ್ಲಿನ ಪರಿಸ್ಥಿತಿ ತೀವ್ರತರವಾಗಿದೆ. ಈ ಬಗ್ಗೆ ಆದ್ಯತೆ ಕೊಡತ್ತೇವೆಂದು ಸರ್ಕಾರದವರು ಹೇಳಿದ್ದರು. ಅಲ್ಲದೆ ನಿದ್ಯುಚ್ಛಕ್ತಿ ಮಂಡಲಿಯವರನ್ನು ಕರೆದು ಮಾತುಕತೆ ಆಡುತ್ತೇವೆಂದು ಕೂಡ ಹೇಳಿದ್ದರು. ಈ ವಿಚಾರ ಹೇಳುವಾಗ ದಯವಾಡಿ ತಾವು ಮನ್ನಿಸಿಕೊಳ್ಳಬಾರದು. ನಗುನಗುತ್ತಾ ಮಾತನಾಡಿದರೆ ಸಂತೋಷವಾಗುತ್ತದೆ.

ಅಧ್ಯಕ್ಷರು:—ಅದಕ್ಕೆ ಒಂದು ವಿಧಿವಿಧಾನ ಇದೆ. ನೀವು ಬರೆದು ಕಳುಹಿಸಿ, ಅದನ್ನು ಸರ್ಕಾರಕ್ಕೆ ಕಳುಹಿಸಿದರೆ ಅವರು ಉತ್ತರಿಸುತ್ತಾರೆ.

ಶ್ರೀ ವಾಟಾಳ್ ನಾಗರಾಜ್:— ಒಂದು ವರ್ಷದಿಂದ ಇದೇ ಆಗುತ್ತಿದೆ. ತಮ್ಮನ್ನು ಕೇಳುತ್ತಿದ್ದೇನೆ, ತಾವಾದರೂ ಒಂದು ಸಭೆ ಕರೆದು ಇದನ್ನು ಸರಿಪಡಿಸುವುದಕ್ಕೆ ವ್ಯವಸ್ಥೆ ಮಾಡಿ.

ಶ್ರೀ ಎಸ್. ಬಂಗಾರಪ್ಪ:—ಸಭೆಯಲ್ಲಿ ಕೇಳುವುದಕ್ಕೆ ಒಂದು ನಿಯಮ ಇದೆ. ಅದಕ್ಕಾಗಿ ೩೩೪ ನಿಯಮಾವಳಿ ಇದೆಯೆಂದು ಮಾನ್ಯ ಸದಸ್ಯರಿಗೆ ಜ್ಞಾಪಿಸುತ್ತಿದ್ದೇನೆ. ಅದರ ಮೂಲಕ ಕೇಳುವುದಕ್ಕೆ ತಾವು ಪ್ರಯತ್ನ ಮಾಡಿ.

ಶ್ರೀ ವಾಟಾಳ್ ನಾಗರಾಜ್:—ನೀವು ಮುಖ್ಯ ಮಂತ್ರಿಯಾದ ಮೇಲೆ ನಾನು ಬರೆಯುವುದನ್ನು ಕಲಿಯಬೇಕಾಗಿದೆ. ಇದು ನಮಗಾಗಿ ಹೊಸದಾಗಿ ಹುಟ್ಟಿರುವ ಉತ್ತರವಾಗಿದೆ. ಇದರಿಂದ ನನಗೆ ಬಹಳ ನೋವಾಗುತ್ತಿದೆ. ಯಾವುದನ್ನು ಬರೆದು ಕಳುಹಿಸಬೇಕೆಂದು ನನಗೆ ಗೊತ್ತಿದೆ.

ಶ್ರೀ ಕೆ. ಬಿ. ಕೋಳಿವಾಡ:—ಮಾನ್ಯ ಅಧ್ಯಕ್ಷರೇ ನಾನು ಕ್ರಿಯಾಲೋಪ ಎತ್ತುತ್ತೇನೆ. ಏನೆಂದರೆ ಇಲ್ಲಿ ಶೂನ್ಯ ವೇಳೆಯನ್ನು ತೆಗೆದು ೩೩೪ರ ನಿಯಮದ ಅಡಿಯಲ್ಲಿ ಪ್ರಶ್ನೆ ಕೇಳಬೇಕೆಂದು ನಿರ್ಣಯ ಮಾಡಿದ್ದೇವೆ. ಆದರೆ ಪ್ರತಿನಿತ್ಯ ಪ್ರಶ್ನೋತ್ತರ ಆದ ಮೇಲೆ ಈ ಮಾನ್ಯ ಸದಸ್ಯರು ಶೂನ್ಯ ವೇಳೆಯನ್ನು ಉಪಯೋಗಿಸಿಕೊಳ್ಳುತ್ತಿದ್ದಾರಲ್ಲ, ಇದಕ್ಕೆ ಅಧ್ಯಕ್ಷರು ಪರವಾನಗಿ ಕೊಟ್ಟಿದ್ದಾರೆಯೇ ಹೇಗೆ?

ಅಧ್ಯಕ್ಷರು:—ಪರವಾನಗಿ ಕೊಟ್ಟಿಲ್ಲ, ಕೊಡುವ ಉದ್ದೇಶ ಇಲ್ಲ.

ಶ್ರೀ ವಾಟಾಳ್ ನಾಗರಾಜ್:— ನಾವು ನೀವು ಯಾವಾಗಲೂ ತೊಂದರೆಯಲ್ಲಿದ್ದೇವೆ.

ಅಧ್ಯಕ್ಷರು:—ನಾನೂ ತೊಂದರೆಯಲ್ಲಿದ್ದೇನೆ. ವಿದ್ಯುಚ್ಛಕ್ತಿಯ ವಿಚಾರದಲ್ಲಿ ನಾವೆಲ್ಲರೂ ತೊಂದರೆಯಲ್ಲಿದ್ದೇವೆ.

ಶ್ರೀ ವಾಟಾಳ್‌ನಾಗರಾಜ್:— ನಾನು ಒಂದು ವರ್ಷದಿಂದ ಹೇಳುತ್ತಿದ್ದೇನೆ. ಈ ಸಭೆಗೆ ಬಂದಾಗಿನಿಂದ ಒಂದೇ ಸಮನೆ ಕೇಳುತ್ತಿದ್ದೇನೆ. ಬರೆದು ಕಳುಹಿಸಿದ್ದೂ ಆಯಿತು. ಸಭೆ ಕರೆಯುತ್ತೇವೆಂದು ಇವರು ಹೇಳಿದ್ದೂ ಆಯಿತು. ನಾವು ಅತ್ಯಂತ ಶೋಚನೀಯ ಪರಿಸ್ಥಿತಿಯಲ್ಲಿದ್ದೇವೆ.

ಆದರಲ್ಲೂ ಈ ಬಗ್ಗೆ ಸರ್ಕಾರದವರು ನಿರ್ಲಕ್ಷ್ಯ ಮಾಡುವುದಾದರೆ ಅದನ್ನು ವಿರೋಧಿಸಿ ನಾನು ಹೊರಗಡೆ ಹೋಗಬೇಕಾಗುತ್ತದೆ. ನಿಜವಾಗಿ ನನಗೆ ನೋವಾಗುತ್ತಿದೆ.

ಅಧ್ಯಕ್ಷರು.—ಈಗ ಮಲ್ಲಾರಿಗೌಡ ಪಾಟೀಲರ ಗಮನ ಸೆಳೆಯಲು ಸೂಚನೆ.

ಶ್ರೀ ವಾಟಾಳ್ ನಾಗರಾಜ್.—ದಯವಾಡಿ ಮಾನ್ಯ ಮುಖ್ಯಮಂತ್ರಿಗಳು ಒಂದು ಸಭೆ ಕರೆದು ಅಧಿಕಾರಿಗಳ ಜೊತೆ ಮಾತನಾಡಿ ಸೂಕ್ತ ವ್ಯವಸ್ಥೆ ಮಾಡಬೇಕು. ನಿಜವಾಗಿ ಅಲ್ಲಿ ತೊಂದರೆ ಇದೆ. ಅಧ್ಯಕ್ಷರೇ, ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ, ಅವರು ವಿದ್ಯುಚ್ಛಕ್ತಿ ಮಂಡಲಿಯವರನ್ನು ಕರೆದು ಮಾತನಾಡುವುದಾದರೆ ನಾನೂ ಸಹ ಬರುತ್ತೇನೆ.

ಅಧ್ಯಕ್ಷರು.—೩೩೪ರ ಪ್ರಕಾರ ಬರೆದು ಕಳುಹಿಸಿ.

ಶ್ರೀ ವಾಟಾಳ್ ನಾಗರಾಜ್.— ಅಧ್ಯಕ್ಷರೇ, ತಮ್ಮ ವಿರುದ್ಧ ನಾನು ಹೊರಗೆ ಹೋಗುತ್ತಿಲ್ಲ. ಸರ್ಕಾರದ ವಿರುದ್ಧ ಸಭಾತ್ಯಾಗ ಮಾಡುತ್ತೇನೆ. ಇನ್ನೇನು ಕೇಳ್ತೀವಿ ಸ್ವಾಮಿ ? ಒಂದು ಸಭೆ ಕರೆದು ತೀರ್ಮಾನ ಮಾಡಿ ವಿದ್ಯುಚ್ಛಕ್ತಿಯ ತೀವ್ರ ಅಭಾವವಾಗಿದೆ. ಪಂಪ್‌ಸೆಟ್‌ಗೆ ತೊಂದರೆಯಾಗಿದೆ ಎಂದು ಕೇಳುತ್ತೇವೆ. ಇದಕ್ಕೂ ಒಪ್ಪದಿದ್ದರೆ ಹೇಗೆ ?

(ಗೊಂದಲ)

ಶ್ರೀ ಎಂ. ರಾಮಪ್ಪ.— ಅಧ್ಯಕ್ಷರೆ, ನಾನು ನೋಡುತ್ತಿದ್ದ ಹಾಗೆ ನನಗೆ ಏನು ಗೊತ್ತಾಯಿತು ಎಂದರೆ ಯಾರು ಗಟ್ಟಿಯಾಗಿ ಮಾತನಾಡುತ್ತಾರೋ, ಅವರೆ ಮಾತನ್ನು ನೀವು ಕೇಳುತ್ತೀರೇನೋ ಎಂದು ನನಗೆ ಅನ್ನಿಸುತ್ತದೆ. ಅವರೊಬ್ಬರಿಗೇ ಈ ಸಭೆಯನ್ನು ಸೀಮಿತ ಮಾಡಿದರೆ ಮಂದಿ ನಮಗೆ ಬಹಳ ಕಷ್ಟವಾಗುತ್ತದೆ ಮತ್ತು ಸದನ ನಡೆಸುವುದಕ್ಕೆ ಕೂಡ ಕಷ್ಟವಾಗುತ್ತದೆ. ನಮಗೆ ಒಂದು ವಿಧವಾದ ಭಯ ಆಗುತ್ತದೆ. ಏಕೆಂದರೆ ಆಷ್ಟು ಗಟ್ಟಿಯಾಗಿ ಮಾತನಾಡುವುದಕ್ಕೆ ನಮ್ಮ ಕೈಯಲ್ಲಿ ಆಗುವುದಿಲ್ಲ. ಅವರಿಗೆ ತಾವು ನಿಯಮಗಳನ್ನು ತಿಳಿಸಿದರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯ.

ಶ್ರೀ ಡಿ. ಬಿ. ಚಂದ್ರೇಗೌಡ —ಮಾನ್ಯ ಅಧ್ಯಕ್ಷರೆ, ತಾವು ಆದೇಶ ಕೊಟ್ಟರೆ ಮುಗಿದು ಹೋಯಿತಲ್ಲ. ರಾಮಪ್ಪನವರಿಗೆ ಗೊತ್ತಾಗಿದೆ ಸಭೆ ನಡೆಸುವುದು ಕಷ್ಟ ಎಂದು. ಮಾನ್ಯ ವಾಟಾಳ್ ನಾಗರಾಜ್ ಅವರು ಏನೋ ಕೇಳುತ್ತಿದ್ದಾರೆ, ಮುಖ್ಯಮಂತ್ರಿಗಳು ಸಹ ಏನೋ ಹೇಳುವುದಕ್ಕೆ ತಯಾರಾಗಿದ್ದಾರೆ. ಮಧ್ಯೆ ತಮ್ಮಿಂದ ಒಂದು ಅನುಮತಿ ಬೇಕು ಅಷ್ಟೆ ;

ಅಧ್ಯಕ್ಷರು.—ನನ್ನ ಅನುಮತಿ.....

ಶ್ರೀ ಆರ್. ಎನ್. ನಾಯಕ್.—ಹಾಗೆ ಮಾಡಿದರೆ ನಾವೂ ಏನಾದರೂ ಪ್ಲಾನ್ ಹುಡುಕ ಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು.—ಒಬ್ಬೊಬ್ಬರೆ ಮಾತನಾಡಿ.

ಶ್ರೀ ಪಿ. ಬಸವರಾಜ್.—ನಾವು ಕೇಳಿದರೂ ಇದೇ ರೀತಿ ಅವಕಾಶ ಕೊಡುತ್ತೀರಾ ?

ಶ್ರೀ ಆರ್. ಎನ್. ನಾಯಕ್.—ಪ್ರತಿ ದಿವಸ ಇದೆ ಕಥೆ ಆಯಿತು. ಹಿಂಗಿನೇ ನಿಯಮದ ಪ್ರಕಾರ ಕೇಳಬೇಕೆಂದು ತಾವು ಆದೇಶ ಕೊಟ್ಟರು ಅವರು ಮತ್ತೆ ತಿರುಗಿ ತಿರುಗಿ ಕೇಳುತ್ತಿದ್ದಾರೆ. ಆದೇ ರೀತಿ ತಾವು ಅವರಿಗೆ ಅವಕಾಶ ಕೊಟ್ಟರ ನಾವೆಲ್ಲಾ ಆದನ್ನು ಅನುಸರಿಸುವ ಸಂದರ್ಭ ಬರಬಹುದೋ ಏನೋ, ಆದ್ದರಿಂದ ದಯಮಾಡಿ ಇನ್ನು ಮುಂದೆ ಅವರಿಗೆ ಸರಿಯಾದ ಒಂದು ಆದೇಶ ಹೇಳಿ ಕೊಡಬೇಕು. ಯಾವುದೇ ನಿಯಮದ ಹೊರತಾಗಿ ಪ್ರಶ್ನೆ ಬಗ್ಗೆರೆ ಕೇಳದೇ ಇದ್ದಹಾಗೆ, ಮಾತನಾಡದೇ ಇದ್ದಹಾಗೆ ತಾವು ಒಂದು ರೂಲಿಂಗ್ ಕೊಡಬೇಕಾಗುತ್ತದೆ.

ಅಧ್ಯಕ್ಷರು.—ಬಸವರಾಜ್ ಅವರೇ, ನೀವು ಏನೋ ಹೇಳಬೇಕೆಂದಿದ್ದೀರಿ ಅಲ್ಲವೇ ?

ಶ್ರೀ ಪಿ. ಬಸವರಾಜ್.—ಈ ಸದನ ಒಂದು ನಿಯಮಾವಳಿಯನ್ನು ಪಾಲಿಸಿಕೊಂಡು ಬಂದಿರುವುದು ತಮಗೆಲ್ಲರಿಗೂ ಗೊತ್ತಿದೆ ; ಆ ನಿಯಮಾವಳಿಗಳ ಪ್ರಕಾರ ಪ್ರಶ್ನೆ ಕೇಳಬೇಕಾಗುತ್ತದೆ. ಈಗ ಗಟ್ಟಿಯಾಗಿ ಮಾತನಾಡುವವರಿಗೇ ಅವಕಾಶ ಸಿಗುವುದಾದರೆ ಗಟ್ಟಿಯಾಗಿ ನಾವೂ ಮಾತನಾಡುವುದಕ್ಕೆ ಬರುತ್ತದೆ. ನಿಯಮಾವಳಿಗಳ ಪ್ರಕಾರ ಮಾಡುತ್ತೀರೋ ಹೇಗೆ ಎಂಬ ಬಗ್ಗೆ ತಾವು ಅಪ್ಪಣೆ ಕೊಡಿಸ ಬೇಕು ಎಂದು ಈ ಸಂದರ್ಭದಲ್ಲಿ ತಮ್ಮನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಗಳು.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು).—ಮಾನ್ಯ ಸಭಾಧ್ಯಕ್ಷರೆ, ನಿಯಮಾವಳಿಗಳನ್ನು ಬಿಟ್ಟು ವ್ಯಪಹಾರ ಮಾಡುವುದಕ್ಕೆ ಸಾಧ್ಯವಿಲ್ಲದಿರುವಂತಹ ಪರಿಸ್ಥಿತಿ. ಇದನ್ನು ಮೂಲಭೂತವಾಗಿ ಮಾನ್ಯ ಸದಸ್ಯರು ವಾಟಾಳ್ ನಾಗರಾಜ್ ರಾಯರು ಮನಗಾಣಬೇಕು.

ಶ್ರೀ ವಾಟಾಳ್ ನಾಗರಾಜ್.—ನೋಡಿ. ರಾಯರಾ ಸ್ವಾಮಿ ನಾನು ? ಎಷ್ಟು ಕಾಚೀದ್ಕದಿಂದ ಮಾತನಾಡುತ್ತಾರೆ ಅವರು ಎಂದರೆ ನಾನಂತೂ ರಾಯರಾಗುವುದಕ್ಕೆ ಸಾಧ್ಯವಿಲ್ಲ. ಸರಿಯಲ್ಲ ಸ್ವಾಮಿ ಇದು. ನಾನು ಹಕ್ಕುಚ್ಯುತಿ ಸೂಚನೆ ಕಳುಹಿಸಬೇಕಾಗುತ್ತದೆ. ನಾನು ವಾಟಾಳ್ ನಾಗರಾಜ್ ಅಷ್ಟೆ. ನಾನು ರಾಯರಲ್ಲ.

ಶ್ರೀ ಎಸ್. ಬಂಗಾರಪ್ಪ.—ನಾನು ಮಾಟಾಳ್ ನಾಗರಾಜ್‌ರವರು ಎಂಬುದಕ್ಕೆ ರಾಯರು ಎಂದೆ. ರಾಯರು ಎಂದರೆ ತುಂಬಾ ಗೌರವದ ವಿಚಾರ ಅಷ್ಟೆ.

ಶ್ರೀ ಹೆಚ್. ವಿಶ್ವನಾಥಯ್ಯ.—ಅದಕ್ಕೇ ಅವರು ಬೇಡ ಎಂದು ಹೇಳುತ್ತಿದ್ದಾರೆ. (ನಗು)

ಅಧ್ಯಕ್ಷರು.—ಅವರು ಹೇಳುತ್ತಾರೆ, ನನಗೆ ಹೇಳುವುದಕ್ಕೆ ಸ್ವಲ್ಪ ಅವಕಾಶ ಕೊಟ್ಟುಬಿಡಿ ನಿಮ್ಮ ಗೌರವ ಅದೆಲ್ಲಾ ಬೇಡ ಎಂದು. (ನಗು)

ಶ್ರೀ ಮಾಟಾಳ್ ನಾಗರಾಜ್.—ಧನ್ಯವಾದಗಳು ಸ್ವಾಮಿ ತಮಗೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರತಕ್ಕ ವಿಷಯದ ಪ್ರಾಮುಖ್ಯತೆಯನ್ನು ನಾನು ಅಲ್ಲಗಳೆಯುವುದಿಲ್ಲ. ಆದರೆ ಪ್ರಸ್ತಾಪ ಮಾಡತಕ್ಕ ವಿಧಿ ವಿಧಾನ ಇಲ್ಲವೆ ಎಂಬುದನ್ನು ಅವರು ಅನಿವಾರ್ಯವಾಗಿ ಗಮನಿಸಬೇಕಾಗುತ್ತದೆ. ವಿಷಯಗಳ ಪ್ರಸ್ತಾಪಕ್ಕೆ ನಿಯಮ ೬೩ಳ ಹಾಗೂ ಇತರೆ ನಿಯಮಗಳು ಇವೆ. ಅದು ಏನೇ ಇದ್ದರೂ ನಾವು ಒಂದು ವಿಷಯ ವಿಶ್ಲೇಷಿದ ಮೇಲೆ ನಾವು ಅದಕ್ಕೆ ಇಲಾಖೆಯಿಂದ ಉತ್ತರ ತಿಳಿದು ಇಲ್ಲಿ ಹೇಳಬೇಕಾಗುತ್ತದೆ. ನಿಯಮದ ಪ್ರಕಾರ ಅವರು ವಿಷಯವನ್ನು ಎತ್ತಿದರೆ ನಾವೂ ಉತ್ತರ ತರಿಸುವುದಕ್ಕೆ ಅನುವು ಮಾಡಿಕೊಳ್ಳಬಹುದು ಇವತ್ತು ಹಕ್ಕು ನಮ್ಮ ಒಬ್ಬರದ್ದೇ ಆಗುವುದಿಲ್ಲ. ಇವತ್ತು ನಿಮ್ಮ ಮೂಲಕ ಪ್ರಾರಂಭವಾದರೆ ಆ ಹಕ್ಕು ಎಲ್ಲಾ ಸದಸ್ಯರಿಗೂ ಕೂಡ ಬರುತ್ತದೆ. ಆದ್ದರಿಂದ ತಮ ಮೂಲಕ ನಾನು ಮಾನ್ಯ ಸದಸ್ಯರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ದಯವಿಟ್ಟು ಅವರು ಅದನ್ನು ಬಿಡಿಸಿ ಕಳುಹಿಸಿಕೊಡಲಿ ಇವತ್ತು ಅವರು ಒಂದು ಸಭೆಯನ್ನು ಕರೆದು ಈ ವಿಷಯದ ಬಗ್ಗೆ ವಿಚಾರ ಮಾಡಿ ಎಂದು ಹೇಳಿದರು. ಇದರ ಬಗ್ಗೆ ತಾವೇ ವಿಚಾರ ಮಾಡಿ. ಇವತ್ತು ರಾಜ್ಯದಲ್ಲಿ ಆದೊಂದೇ ತಾಲ್ಲೂಕು ಇಷ್ಟ. ಇವತ್ತು ಅಲ್ಲಿ ಮಾಡಿದರೆ ನಾಳೆ ಎಲ್ಲಾ ತಾಲ್ಲೂಕುಗಳಲ್ಲಿ ಸಭೆ ಮಾಡಬೇಕೆಂದರೆ ಏನಾದೀತು ಎಂಬುದನ್ನು ಮನಗಾಣಬೇಕು. ದಯವಿಟ್ಟು ಮಾನ್ಯ ಸದಸ್ಯರು ಬರೆದುಕೊಡಲಿ. ನಾನು ಹೇಳಿಕೆ ಕೊಡುವುದಕ್ಕೆ ತಯಾರು ಇದ್ದೇನೆ. ಆದರ ಬಗ್ಗೆ ತಮಗೆ ಅನುಮಾನ ಬೇಡ.

ಗಮನ ಸೆಳೆಯುವ ಸೂಚನೆ

ರಾಜ್ಯದಲ್ಲಿ ಹರಡುತ್ತಿರುವ ಏಡ್ಸ್ ರೋಗದ ಬಗ್ಗೆ

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಹರಡುತ್ತಿರುವ ಏಡ್ಸ್ ರೋಗದ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಈ ಕೆಳಕಂಡ ಹೇಳಿಕೆಯನ್ನು ನಾನು ಕೊಡಬಯಸುತ್ತೇನೆ.

ರಾಜ್ಯದಲ್ಲಿ ಈವರೆಗೆ ೬ ಏಡ್ಸ್ ರೋಗದ ಪ್ರಕರಣಗಳು ವರದಿಯಾಗಿವೆ.

೧೯೮೮—೪

೧೯೮೯—೩

೧೯೯೦—೩

(೩೧-೧೦-೧೯೯೦ ರವರೆಗೆ)

ರಾಜ್ಯದಲ್ಲಿ ಮೂರು ತಪಾಸಣಾ ಕೇಂದ್ರಗಳು ಕೇಂದ್ರ ಸರ್ಕಾರದ ಸಹಾಯದಿಂದ ಸ್ಥಾಪಿತವಾಗಿವೆ. ಬೆಂಗಳೂರಿನಲ್ಲಿ ಎರಡು ಸಂಸ್ಥೆಗಳು ವಿಕ್ಟೋರಿಯಾ ಆಸ್ಪತ್ರೆ ಮತ್ತು ಬೌರಿಂಗ್ ಆಸ್ಪತ್ರೆ ಯಲ್ಲಿ ಕಾರ್ಯ ನಿರತವಾಗಿವೆ. ಹುಬ್ಬಳ್ಳಿ ಕೆ.ಎಂ.ಸಿ. ಆಸ್ಪತ್ರೆಯಲ್ಲಿ ಒಂದು ತಪಾಸಣಾ ಕೇಂದ್ರ ಸ್ಥಾಪಿತವಾಗಿದೆ. ಈ ಕೇಂದ್ರಗಳ ಜೊತೆಗೆ ಹೆಚ್ ಎಸ್ ಐ.ಎಸ್.. ಸರ್ಕಾರಿ ಗೋಷಾ ಆಸ್ಪತ್ರೆ ಹಾಗೂ, ಮಲ್ಲೇಶ್ವರಂ ಕೆ. ಸಿ. ಜನರಲ್ ಆಸ್ಪತ್ರೆಗೂ ಮತ್ತು ಕಿದ್ವಾಯ್ ಕ್ಯಾನ್ಸರ್ ಆಸ್ಪತ್ರೆಗೂ ಏಡ್ಸ್ ರೋಗ ತಪಾಸಣಾ ಉಪಕರಣಗಳು ಭಾರತ ಸರ್ಕಾರದಿಂದ ಉಚಿತವಾಗಿ ಸರಬರಾಜು ಮಾಡಲ್ಪಟ್ಟಿರುತ್ತದೆ.

ಈ ರೋಗಕ್ಕೆ ನಿಶ್ಚಿತವಾದ ಚಿಕಿತ್ಸೆ ಇನ್ನೂ ಗೊತ್ತಿಲ್ಲ. ರೋಗ ಲಕ್ಷಣಗಳಿಗೆ ಅನುಸಾರವಾಗಿ ಚಿಕಿತ್ಸೆಯನ್ನು ಕೊಡಲಾಗುವುದು. ಈ ಕಾರ್ಯಕ್ರಮಕ್ಕೆ ಅವಶ್ಯಕವಿರುವ ಪೂರೈಕೆ ಮತ್ತು ನೆರವನ್ನು ಒದಗಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಿರಂತರವಾಗಿ ಪ್ರಯತ್ನಿಸುತ್ತಿವೆ. ರೋಗಿಗಳನ್ನು